






ಯುಗಾದಿ ದಿನದಂದು ನಾಡಿನ ಕೆಲವೆಡೆ 'ಹೊನ್ನಾರು ಉಳುಮೆ' ಆಚರಣೆ ನಡೆಯುತ್ತದೆ. ಇದು ಅರಕಲಗೂಡು ತಾಲ್ಲೂಕಿನ ದುಮ್ಮಿ ಗ್ರಾಮದಲ್ಲಿನ ರೈತರ ಯುಗಾದಿ ಸಂಭ್ರಮ.



ಹೊಸ ಸಂವತ್ಸರ ಸೊಂಟದ ದಾರ ಬದಲಿಸುವ ಸಂದರ್ಭವೂ ಹೌದು.

ಮಾತಿನ ಬಲೂನು ಹಿಗ್ಗುವಾಗ್ಗೆಲ್ಲ ತಾಗಿಸು ನಿಜದ ಸೂಜಿಮೊನೆ' (ಗೋಪಾಲಕೃಷ್ಣ ಅಡಿಗ) ಎನ್ನುವ ಮಾತನ್ನು ನಿಜಗೊಳಿಸುವಂತಿದೆ ಬೇವು–ಬೆಲ್ಲದ ರೂಪಕ. ಬದುಕಿನಲ್ಲಿ ಬೆಲ್ಲದ ಸಿಹಿಯಷ್ಟೇ ಇಲ್ಲದಿದ್ದರೂ, ನಾವು ಸಿಹಿಗಾಗಿಯೇ ಹಂಬಲಿಸುತ್ತೇವೆ. ಆ ಸಿಹಿಯೇ (ಭ್ರಮೆಯೇ) ಮಾತಿನ ಬಲೂನು! ಬೇವೆನ್ನುವುದು ನಿಜದ ಸೂಜಿಮೊನೆ. ಸತ್ಯ ಕಹಿಯಾಗಿರುತ್ತದೆ ಎನ್ನುವ ಮಾತಿದೆ. ಬೇವೂ ಕಹಿಯೇ. ಕಹಿ ನಾಲಿಗೆಗೆ ರುಚಿಸದೆ ಹೋದರೂ ಆರೋಗ್ಯಕ್ಕೆ ಅಗತ್ಯವಾದುದು. ಕಹಿಯೂ ಒಂದು ರುಚಿಯಷ್ಟೇ.

ಮನುಷ್ಯ ಪ್ರಕೃತಿಯಿಂದ ಬಯಲ ಪ್ರಕೃತಿಯತ್ತ ಕಣ್ಣುಹಾಯಿಸೋಣ. ಯುಗಾದಿ, ಮರಗಿಡಗಳು ಹಸಿರನುಟ್ಟು ಸಂಭ್ರಮಿಸುವ ಸಂದರ್ಭವಷ್ಟೇ. ಬಿಸಿಲನುಂಡು ಹಸಿರು ಕಕ್ಕುವ ಮರಗಿಡಗಳು ನಮಗೇನಾದರೂ ಪಾಠ ಹೇಳುತ್ತಿವೆಯೆ?

ಯುಗಾದಿ ಸಂದರ್ಭದಲ್ಲಿ ಪ್ರಕೃತಿಯೂ ಸಂಭ್ರಮಿಸುತ್ತದೆ; ಸಂಭ್ರಮವೇ ತಾನಾಗುತ್ತದೆ. ಕುವೆಂಪು ಅವರ ಕಣ್ಣಿಗೆ 'ಯುಗಾದಿ' ಕಾಣಿಸಿರುವುದು ಹೀಗೆ: 'ಹೊಸ ಮರದಲಿ ಹೂ ತುಂಬಿದೆ ನೋಡು! / ಆಲಿಸು! ಜೇನಿನ ಹಬ್ಬದ ಹಾಡು! / ಜೀವನವೆಂಬುದು ಹೂವಿನ ಬೀಡು.' ಇದೇ ಅಲ್ಲವೇ ಯುಗಾದಿ ದರ್ಶನ, ಜೀವನದರ್ಶನ. ಅನುದಿನದ ದಂದುಗಗಳ ನಡುವೆಯೂ, ಜೀವನೋತ್ಸಾಹದ ಗೆಲ್ಲೊಂದನ್ನು ಬದುಕಿನೊಂದಿಗೆ ಕಸಿ ಮಾಡಿಕೊಳ್ಳಲು ಯುಗಾದಿ ಒತ್ತಾಯಿಸುತ್ತದೆ.

ಯುಗಾದಿಯಂದು ಬಂಧುಮಿತ್ರರು ಸೇರಿ, ಹೋಳಿಗೆಯನುಂಡು ಸಂಭ್ರಮಿಸುತ್ತೇವೆ. ಮರಕ್ಕೆ ಜೋಕಾಲಿ ಕಟ್ಟಿ ನೆಲಮುಗಿಲು ಹತ್ತಿರವಾಗಿಸುವಂತೆ ಜೀಕಾಟವಾಡುತ್ತೇವೆ. ಹಬ್ಬದ ಸಂಭ್ರಮವನ್ನು ಜೂಜಿನಲ್ಲಿ ಕಾಣುವವರೂ ಇದ್ದಾರೆ. ಯುಗಾದಿ ಫಲಾಫಲಗಳ ಅರಿಯುವ ಮೂಲಕ, ವರ್ಷದ ನಾಳೆಗಳ ಲೆಕ್ಕ ಹಾಕುವವರೂ ಇದ್ದಾರೆ. ಮಹತ್ವಾಕಾಂಕ್ಷೆಯ ಕೆಲಸವೊಂದನ್ನು ಆರಂಭಿಸುವುದಕ್ಕೆ ಯುಗಾದಿ ಸೊಗಸಾದ ಮುನ್ನುಡಿ. ಇದೆಲ್ಲದರ ಅರ್ಥ ಇಷ್ಟೇ: ಯುಗಾದಿ ಎನ್ನುವುದು ಒಂದು ದಿನದ ಸಂಭ್ರಮವಲ್ಲ. ಅದು ಇಡೀ ಸಂವತ್ಸರ ಸುರಳೀತವಾಗಿರಲೆನ್ನುವ ಆಶಯದ ಆಚರಣೆ. ನಮ್ಮ ಬದುಕಿನ ವರ್ಷವೊಂದು ಹೇಗಿರಬೇಕು ಎನ್ನುವುದರ ಕರಡು ಸಿದ್ಧಪಡಿಸಿಕೊಳ್ಳಲು ಲೇಖನಿಯಾಗಿ ಯುಗಾದಿ ಒದಗಿಬರುತ್ತದೆ.

ಯುಗಾದಿ ಮರಳಿ ಮರಳಿ ಬಂದಿದೆ. 'ಮರಳಿ ಮರಳಿ' ಎನ್ನುವ ವಿಶೇಷಣವನ್ನು ಗಮನಿಸಿ. ಮರಳಿ ಎನ್ನುವ ಪದಕ್ಕೆ ಕುದಿ ಎನ್ನುವ ಅರ್ಥವೂ ಇದೆ. ಮರಳಿ ಮರಳಿ ಬರುತಿದೆ ಎನ್ನುವ ಮಾತಿನಲ್ಲಿ ಯುಗಾದಿ ಸಂದರ್ಭದಲ್ಲಿನ ಬಿಸಿಲ ತಾಂಡವದ ಚಿತ್ರಣವೂ ಇದೆ ಎಂದಿದ್ದರಂತೆ ವಿಮರ್ಶಕ ಕಿ.ರಂ. ನಾಗರಾಜ. ಈ ಬಾರಿಯ ಯುಗಾದಿಯಂತೂ ಕೊತಕೊತನೆ ಮರಳುತ್ತಿದೆ. ಹೊರಗಿನ ಉರಿಯನ್ನು ಒಳಗಿನ ತೇವದಿಂದ ಎದುರಿಸುವುದು ನಮಗುಳಿದಿರುವ ಮಾರ್ಗ.

ಪ್ರತಿಕ್ರಿಯಿಸಿ: **feedback@sudha.co.in**